kpeta.weebly.com

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 20 ವರ್ಷ ಸೇವೆ ಸಲ್ಲಿಸಿದ ಗ್ರೇಡ್-2 ದೈಹಿಕ ಶಿಕ್ಷಕರಿಗೆ ಗ್ರೇಡ್-1 ದೈಹಿಕ ಶಿಕ್ಷಕರ ಹುದ್ದೆಗೆ ಉನ್ನತೀಕರಿಸಿ ಬಡ್ತಿ ನೀಡುವ ಸೌಲಭ್ಯವನ್ನು ಅನುದಾನಿತ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರಿಗೆ ವಿಸ್ತರಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಇಡಿ 203 ಎಸ್‌ಎಲ್‌ಬಿ 96 ದಿನಾಂಕ:20-6-99.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 20 ವರ್ಷದ ಸೇವೆಯ ನಂತರವೂ ಯಾವುದೇ ಮುಂಬಡ್ತಿಯನ್ನು ಪಡೆಯದ ಗ್ರೇಡ್-2 ದೈಹಿಕ ಶಿಕ್ಷಕರು ಮಾತ್ರ ರೂ.4150-7800 ವೇತನ ಶ್ರೇಣಿಯುಳ್ಳ ಸೀಮಿತವಾದ ಗ್ರೇಡ್-1 ದೈಹಿಕ ಶಿಕ್ಷಕ ವೃಂದಕ್ಕೆ ಮುಂಬಡ್ತಿಗೆ ಅರ್ಹರಾಗಿರುತ್ತಾರೆ. ಈ ಉನ್ನತೀಕರಣದ ಕಾರಣದಿಂದ ಗ್ರೇಡ್-2 ದೈಹಿಕ ಶಿಕ್ಷಕರ ಶಾಶ್ವತ ವೃಂದಬಲದಿಂದ ಶೇ.25ರಷ್ಟು ಹುದ್ದೆಗಳು ಕಡಿಮೆಯಾಗುತ್ತವೆ. ಈ ರೀತಿ ಗ್ರೇಡ್-2 ದೈಹಿಕ ಶಿಕ್ಷಕರ ಶಾಶ್ವತ ವೃಂದಬಲದಿಂದ ಶೇ.25ರಷ್ಟು ಹುದ್ದೆಗಳಿಗೆ ಸೀಮಿತವಾದ ಗ್ರೇಡ್-2 ದೈಹಿಕ ಶಿಕ್ಷಕರ ಹುದ್ದೆಗಳನ್ನು ಉನ್ನತೀಕರಿಸುವುದರಿಂದ ಸಾಮಾನ್ಯವಾಗಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ 4 ಮತ್ತು ಅದಕ್ಕಿಂತ ಹೆಚ್ಚಿನ ಪ್ರಾಥಮಿಕ ಶಾಲೆಗಳು ಇದ್ದಲ್ಲಿ ಅವುಗಳಿಗೆ ಮಾತ್ರ ಈ ರೀತಿಯ ಸೌಲಭ್ಯ ದೊರೆಯುವ ಸಾಧ್ಯತೆ ಇರುತ್ತದೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಒಂದೊಂದೇ ಪ್ರಾಥಮಿಕ ಶಾಲೆಗಳನ್ನು kpeta.weebly.com ಮಾತ್ರ ನಡೆಸುತ್ತಿದ್ದಲ್ಲಿ ಈ ರೀತಿಯ ಸೌಲಭ್ಯ ದೊರೆಯುವುದಿಲ್ಲ. ಆದುದರಿಂದ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ (ಒಂದೇ ಪ್ರಾಥಮಿಕ ಶಾಲೆಯಲ್ಲಿ) 20 ವರ್ಷಗಳ ಮೇಲ್ಪಟ್ಟು ಯಾವುದೇ ಬಡ್ತಿ ದೊರೆಯದೇ ಕೆಲಸ ಮಾಡುತ್ತಿರುವ ಗ್ರೇಡ್-2 ದೈಹಿಕ ಶಿಕ್ಷಕರಿಗೆ (ವೃಂದಬಲದ ಶೇ.25ರಷ್ಟು ಹುದ್ದೆಗಳನ್ನು ಎಂಬ ಮಿತಿಯನ್ನು ಬಿಟ್ಟು) ಸೀಮಿತವಾದ ಗ್ರೇಡ್-2 ದೈಹಿಕ ಶಿಕ್ಷಕ ಹುದ್ದೆಗೆ ಉನ್ನತೀಕರಿಸಲು ಪ್ರಸ್ತಾಪಿಸಲಾಗಿದೆ.

kpeta.weebly.com
kpeta.weebly.com

20 ವರ್ಷಗಳ ಸೇವೆ ಸಲ್ಲಿಸಿದಂತಹ ದೈಹಿಕ ಶಿಕ್ಷಕರಿಗೆ ಈ ಸೌಲಭ್ಯ ನೀಡದೆ ಇರುವ ಅಂಶವನ್ನು ವಿಧಾನ ಪರಿಷತ್ತಿನ ಭರವಸೆ ಸಮಿತಿಯಲ್ಲಿ ಪ್ರಸ್ತಾಪ ಮಾಡಲಾಗಿರುತ್ತದೆ. ಭರವಸೆ ಸಮಿತಿಯವರು ಈ ವಿಷಯವನ್ನು ಪುನರ್ ಪರಿಶೀಲಿಸಿ ಶಿಕ್ಷಣ ಇಲಾಖೆಯ ಸಮಾನಾಂತರ ಹುದ್ದೆಗಳಾದ ಸಹ ಶಿಕ್ಷಕರಿಗೆ ಈಗಾಗಲೇ 20 ವರ್ಷಗಳ ಸೇವೆ ಸಲ್ಲಿಸಿದ ಎಲ್ಲಾ ಶಿಕ್ಷಕರಿಗೂ ಹಿರಿಯ ವೇತನ ಶ್ರೇಣಿ ನೀಡುವ ಸೌಲಭ್ಯವಿರುವುದರಿಂದ ಅಂತಹುದೇ ಸೌಲಭ್ಯವನ್ನು ದೈಹಿಕ ಶಿಕ್ಷಕರಿಗೂ ನೀಡುವ ಬಗ್ಗೆ ಮುತುವರ್ಜಿವಹಿಸಿ ಪರಿಶೀಲಿಸಿ ಆದೇಶ ಹೊರಡಿಸುವಂತೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ 20 ವರ್ಷ ಸೇವೆ ಸಲ್ಲಿಸಿದಂತಹ ಎಲ್ಲಾ ಗ್ರೇಡ್-1 ಮತ್ತು ಗ್ರೇಡ್-2 ದೈಹಿಕ ಶಿಕ್ಷಕರಿಗೂ ಹಿರಿಯ ವೇತನಶ್ರೇಣಿ ಸೌಲಭ್ಯವನ್ನು ನೀಡಬೇಕೆಂಬ ಬೇಡಿಕೆಯನ್ನು ಪರಿಶೀಲಿಸಿ ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 203 ಎಸ್‌ಎಲ್‌ಬಿ 96, ಬೆಂಗಳೂರು, ದಿನಾಂಕ:4-2-2002**

ಸರ್ಕಾರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಷರತ್ತಿಗೆ ಒಳಪಟ್ಟು ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರಿಗೆ ಈ ಕೆಳಗಿನಂತೆ ಸೌಲಭ್ಯ ವಿಸ್ತರಿಸಲು ಆದೇಶಿಸಿದೆ.

**ಷರತ್ತುಗಳು:**

1. ವೇತನ ಶ್ರೇಣಿ ರೂ.3300-6300ರ ಗ್ರೇಡ್-2 ದೈಹಿಕ ಶಿಕ್ಷಕರ ವೃಂದದಲ್ಲಿ 20 ವರ್ಷಗಳ ಸೇವೆ ಸಲ್ಲಿಸಿದ ಮತ್ತು ಈ ಹುದ್ದೆಗೆ ನೇರ ನೇಮಕಾತಿಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಹೊಂದಿರುವವರಿಗೆ ಮಾತ್ರ ವೇತನ ಶ್ರೇಣಿ ರೂ.4150-7800 ದೈಹಿಕ ಶಿಕ್ಷಕ ಸೀಮಿತವಾದ ಗ್ರೇಡ್-2 ನೀಡತಕ್ಕದ್ದು.

ಅಧ್ಯಕ್ಷರು
ಕ. ರಾ. ಪ್ರಾ. ಶಾಲಾ ಶಿಕ್ಷಕರ ಸಂಘ
ಬೆಂಗಳೂರು

ಮು. ಕಾ. ಸಹಿ.

Scanned with CamScanner

kpeta.weebly.com



ಅಧ್ಯಕ್ಷರು
ಕ.ರಾ. ದೈ. ಶಿಕ್ಷಣ ಶಿಕ್ಷಕರ ಸಂಘ
ಬೆಂಗಳೂರು

2. ಗ್ರೇಡ್-1 ದೈಹಿಕ ಶಿಕ್ಷಕರ ವೃಂದದಲ್ಲಿ 20 ವರ್ಷಗಳ ಸೇವೆ ಸಲ್ಲಿಸಿದ ಮತ್ತು ಈ ಹುದ್ದೆಗೆ ನೇರ ನೇಮಕಾತಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಹೊಂದಿದ್ದಲ್ಲಿ ಮಾತ್ರ, ವೇತನ ಶ್ರೇಣಿ ರೂ.5575-10620 ಯ ದೈಹಿಕ ಶಿಕ್ಷಕ ಸೀನಿಯರ್ ಗ್ರೇಡ್-1 ನೀಡತಕ್ಕದ್ದು.

3. 20 ವರ್ಷಗಳ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ (ಜೇಷ್ಠತೆ) ನಿಯಮಗಳು 1977 ರನ್ವಯ ಜೇಷ್ಠತೆಗೆ ಪರಿಗಣಿಸುವ ರೀತಿಯಲ್ಲಿಯೇ ಪರಿಗಣಿಸತಕ್ಕದ್ದು. ಆದರೆ ಜೇಷ್ಠತೆ ನಿಯಮಗಳನ್ವಯ ಯಾವ ಸೇವೆಯನ್ನು ಜೇಷ್ಠತೆಗೆ ಪರಿಗಣಿಸಲಾಗುವುದಿಲ್ಲವೋ ಅಂತಹ ಸೇವೆಯನ್ನು ಸೀನಿಯರ್ ಗ್ರೇಡ್-1 ಅಥವಾ ಸೀನಿಯರ್ ಗ್ರೇಡ್-2 ಸೌಲಭ್ಯ ನೀಡುವ ಉದ್ದೇಶಕ್ಕಾಗಿ ಪರಿಗಣಿಸಲಾಗುವುದಿಲ್ಲ.

4. ಸೀನಿಯರ್ ಗ್ರೇಡ್-1 ಮತ್ತು ಸೀನಿಯರ್ ಗ್ರೇಡ್-2 ಹುದ್ದೆಯಲ್ಲಿ ವೇತನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 42-ಬಿ ರನ್ವಯ ನಿಗದಿಪಡಿಸತಕ್ಕದ್ದು.

5. ಸೀನಿಯರ್ ಗ್ರೇಡ್-1 ಅಥವಾ ಸೀನಿಯರ್ ಗ್ರೇಡ್-2 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೊಂದಿರುವ ಶಿಕ್ಷಕರು ಮುಂಬಡ್ತಿ, ಅಥವಾ ನಿಧನ ಅಥವಾ ನಿವೃತ್ತಿ, ಅಥವಾ ಇನ್ಯಾವುದೇ ಕಾರಣಗಳಿಗಾಗಿ ಈ ಹುದ್ದೆಗಳನ್ನು ತೆರವು ಮಾಡಿದಲ್ಲಿ ಈ ಹುದ್ದೆಯು ತಾನೇ ತಾನಾಗಿ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗೆ ಸಂದರ್ಭಕ್ಕನುಸಾರವಾಗಿ ನಿಮ್ನೀಕರಣಗೊಳ್ಳುವುದು.

kpeta.weebly.com

6. ಈ ಸೌಲಭ್ಯ ಸೇವೆಯಲ್ಲಿ ಒಂದು ಬಾರಿ ಮಾತ್ರ ನೀಡತಕ್ಕದ್ದು. ಆದರೆ ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-2 ಹುದ್ದೆಯಲ್ಲಿ ಸೀನಿಯರ್ ಗ್ರೇಡ್-2 ವೇತನ ಶ್ರೇಣಿ ರೂ.4150-7800 ಯ ಸೌಲಭ್ಯ ಪಡೆದಲ್ಲಿ, ದೈಹಿಕ ಶಿಕ್ಷಕ ಗ್ರೇಡ್-1 ಹುದ್ದೆಯಲ್ಲಿ ಈ ಸೌಲಭ್ಯ ನೀಡತಕ್ಕದ್ದಲ್ಲ.

kpeta.weebly.com
kpeta.weebly.com

7. ಸಂಬಂಧಪಟ್ಟ ಸೇವಾಂತರ್ಗತ ನಿಯಮಗಳಿಗೆ [illegible] ಮಾಡತಕ್ಕದ್ದು.

ಇದರಿಂದ ಉದ್ಭವಿಸುವ ಅಧಿಕ ವೆಚ್ಚವನ್ನು ಇಲಾಖೆಯು ಈ ವರ್ಷ ನಿಗದಿಪಡಿಸಿದ ಅನುದಾನದಲ್ಲಿ ಭರಿಸತಕ್ಕದ್ದು ಹಾಗೂ ಇದಕ್ಕಾಗಿ ಹೆಚ್ಚಿನ ಅನುದಾನ ನೀಡಲಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 819 ವೆಚ್ಚ-8:2001 ದಿನಾಂಕ:19-1-2002ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಅಧ್ಯಕ್ಷರು
ಕ.ರಾ. ದೈ. ಶಿಕ್ಷಣ ಶಿಕ್ಷಕರ ಸಂಘ
ಬೆಂಗಳೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು (ಪ್ರಾಥಮಿಕ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಎಲ್ಲಾ ವಿಭಾಗದ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
5) ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆ-2):(ವೆಚ್ಚ-8).
7) ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಸಾಮಾನ್ಯ):(ಸೇವೆಗಳು-1).
6) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

Scanned with CamScanner